ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ

೧೬೦೨. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲು ಕೈಗೊಂಡಿರುವ ಕ್ರಮಗಳನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಯುತ್ತಿದೆ. ಕರ್ನಾಟಕದ ಲೋಕಸಭಾ ಹಾಗೂ ರಾಜ್ಯ ಸಭಾ ಸದಸ್ಯರಿಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವಂತೆ ಕೋರಲಾಗಿದೆ.

ಅಮದು ಮಾಡಿಕೊಳ್ಳುವ ಹಾಗೂ ಉತ್ಪಾದನೆ ಆಗುತ್ತಿರುವ ವಿದ್ಯುತ್ ಬೆಲೆಯ ಬಗ್ಗೆ

೧೫೩೧. ಶ್ರೀ ರಾಮಯ್ಯ (ಹಿರಿಯೂರು).— ಮಾನ್ಯ ವಾಣಿಜ್ಯ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಲ್ಲಾ ಉದ್ದೇಶಕ್ಕಾಗಿ ವಿದ್ಯುಚ್ಛಕ್ತಿ ಬೇಡಿಕೆ ಎಷ್ಟು ?

ಆ) ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್ ಎಷ್ಟು ?

ಇ) ಕಡಿಮೆ ಬರುವ ವಿದ್ಯುತ್ತನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಇದು ನೆರೆ ರಾಜ್ಯಗಳಿಂದ ಸರಬರಾಜಾಗುತ್ತಿದ್ದರೆ ಯೂನಿಟ್ಟು ಬೆಲೆ ನಮ್ಮ ರಾಜ್ಯಕ್ಕಿಂತ ಹೆಚ್ಚಾಗಿದ್ದರೆ ಸರ್ಕಾರದವರು ಇದಕ್ಕಾಗಿ ಪ್ರತಿ ವರ್ಷವೂ ಎಷ್ಟು ಹಣ ಖರ್ಚು ಮಾಡುತ್ತಿದ್ದಾರೆ, ಮತ್ತು ಗ್ರಾಹಕರಿಂದ ಎಷ್ಟರಮಟ್ಟಿಗೆ ಸಂದಾಯವಾಗುತ್ತಿದೆ ?

ಉ) ಇದರಿಂದಾಗಿ ಕೈಗಾರಿಕೆ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ತೊಂದರೆಯಾಗುವುದಿಲ್ಲವೆ? ಇದನ್ನು ಅರ್ಥಪೂರ್ಣವಾಗಿ ಮಾಡಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಎಲ್ಲಾ ಗ್ರಾಹಕರ ಅನಿರ್ಬಂಧಿತ ನಿರೀಕ್ಷಿತ ವಿದ್ಯುತ್ ಬೇಡಿಕೆ ಸುಮಾರು ೧೫,೫೦೦ ದಶ ಲಕ್ಷ ಯೂನಿಟ್ಟುಗಳು.

ಆ) ೧೯೮೬-೮೭ ರಲ್ಲಿ ಸುಮಾರು ೭೬೫೨ ದಶಲಕ್ಷ ಯೂನಿಟ್ಟುಗಳು.

ಇ) ಕೊರತೆಯನ್ನು ಭಾಗಶಃ ನೀಗಲು ನೆರೆ ರಾಜ್ಯಗಳಿಂದ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ನೆರವು ಪಡೆಯಲಾಗುತ್ತಿದೆ. ಕೇಂದ್ರದ ಯೋಜನೆಗಳಾದ ರಾಮಗುಂಡಂ, ನೈವೇಲಿ, ಕಲ್ಪಕಂ ಯೋಜನೆಗಳಿಂದ ರಾಜ್ಯದ ಪಾಲನ್ನು ಪಡೆಯಲಾಗುತ್ತಿದೆ. ಇವುಗಳಿಂದ ೧೯೮೬-೮೭ ರಲ್ಲಿ ಸುಮಾರು ೨೫೯೩ ದಶ ಲಕ್ಷ ಯೂನಿಟ್ಟುಗಳು ದೊರೆಯುವ ನಿರೀಕ್ಷೆಯಿದೆ.

ಈ) ನೆರೆ ರಾಜ್ಯ ಮತ್ತು ಕೇಂದ್ರ ಯೋಜನೆಗಳಿಂದ ಪಡೆಯುತ್ತಿರುವ ವಿದ್ಯುತ್ತಿನ ಬೆಲೆ ಮತ್ತು ರಾಜ್ಯದಲ್ಲಿನ ವಿದ್ಯುತ್ ದರ ಅನುಬಂಧದಲ್ಲಿ ನೀಡಿದೆ. ನೆರೆ ರಾಜ್ಯಗಳಿಂದ ಬರುವ ವಿದ್ಯುತ್ ರಾಜ್ಯದಲ್ಲಿ ಉತ್ಪತ್ತಿಯಾಗುವ ವಿದ್ಯುತ್ತಿನೊಂದಿಗೆ ವಿಲಿನವಾಗುವುದರಿಂದ ಆಮದಾದ ವಿದ್ಯುತ್ ಯಾವ ವರ್ಗದ ಗ್ರಾಹಕರಿಗೆ ಸರಬರಾಜಾಯಿತೆನ್ನುವುದನ್ನು ಗುರುತಿಸಲು ಸಾಧ್ಯವಿಲ್ಲ. ಇದರಿಂದಾಗಿ ಕೊಂಡ ಮತ್ತು ಮಾರಿದ ದರದಲ್ಲಿನ ವ್ಯತ್ಯಾಸ ಗುರುತಿಸಲಾಗುವುದಿಲ್ಲ. ಈ ವಿದ್ಯುತ್ ಎಲ್ಲರಿಗೂ ಒದಗಿಸಲ್ಪಡುತ್ತದೆ.

ಉ) ಕೈಗಾರಿಕೆ, ನೀರಾವರಿ ಪಂಪುಸೆಟ್ಟುಗಳು ಮತ್ತು ಇತರೆ ವರ್ಗದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುವ ದರವನ್ನು ನಿಗದಿ ಮಾಡಿದೆ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.